**ಸಿವಿಲ್ ನ್ಯಾಯಾಧೀಶರು ಹಾಗೂ ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳು**
**ಇಂಡಿ.**
**ಸಿಸಿ.ನಂಃ 1025/2017**

**ಪಿ.ಡಬ್ಲ್ಯೂ– 05**
**ಸಿ.ಡಬ್ಲ್ಯೂ– 11**

| | | |
|---|---|---|
| ಸಾಕ್ಷಿಯ ಹೆಸರು | : | ಜುನ್ನೈಲ ಕಟವಟಿ |
| ತಂದೆ/ಗಂಡನ ಹೆಸರು | : | ಇಮಾನಿವೆಲ್ |
| ವಯಸ್ಸು | : | 49 ವರ್ಷ |
| ಉದ್ಯೋಗ | : | ಹಿರಿಯ ವೈದ್ಯಾಧಿಕಾರಿಗಳು ಚಡಚಣ |
| ವಾಸಸ್ಥಳ | : | ಚಡಚಣ, |

**ದಿನಾಂಕಃ 31–05–2024 ರಂದು ಸಾಕ್ಷಿದಾರರನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತುಃ**

**ಮುಖ್ಯ ವಿಚಾರಣೆಃ ಮಾನ್ಯ ಸ. ಸ.ಅ ರವರಿಂದ:**

ನಾನು 2005 ರಿಂದ ಇಲಿಯವರೆಗೆ ಚಡಚಣ ಸರ್ಕಾರಿ ಆಸ್ಪತ್ರೆಯಲ್ಲಿ ವೈದ್ಯಾಧಿಕಾರಿಗಳು ಅಂತಾ ಕಾರ್ಯ ನಿರ್ವಹಿಸುತ್ತಿದ್ದೇನೆ.

ಈ ಪ್ರಕರಣಕ್ಕೆ ಸಂಬಂಧಿಸಿದಂತೆ ಚಾಸಾ–1 ರವರು ದಿಃ 19.02.2017 ರಂದು ರಾತ್ರಿ 08.30 ಗಂಟೆಗೆ ಚಡಚಣ ಪೊಲೀಸ್ ಮಹಿಳಾ ಪೊಲೀಸರು ರವರು ಕಟ್ಟಿಗೆಯಿಂದ ಆದ ಹಲ್ಲೆ ಹಿನ್ನೆಲೆಯಲ್ಲಿ ಆದ ಗಾಯಗಳು ಚಿಕಿತ್ಸೆ ಕುರಿತು ಆಸ್ಪತ್ರೆಗೆ ಕರೆದುಕೊಂಡು ಬಂದಿದ್ದರು. ಆಗ ಅವರನ್ನು ನಾನು ಪರಿಶೀಲಿಸಿದಾಗ ಈ ಕೆಳಕಂಡತೆ ಗಾಯಗಳು ಕಂಡುಬಂದಿದ್ದವು.

1) Right side head laceration. (ತೆರಚಿದ ಗಾಯ)

2) Hemotom over buttes. (ಕಂದು ಗಟ್ಟಿದ ಗಾಯ)

ಮೇಲಿನ ಎರಡು ಗಾಯಗಳು ಸಾದಾ ಸ್ವರೂಪದ ಗಾಯಗಳು ಆಗಿದ್ದವು. ಆಸ್ಪತ್ರೆಗೆ ಬರವುಕ್ಕಿಂತ ಮುಂಚೆ ಸುಮಾರು 1 to 2 ಗಂಟೆಗಳ ಹಿಂದೆ ಸದರಿ ಗಾಯ ಆಗಿರುವ ಸಾದ್ಯತೆ ಇರುತ್ತದೆ. ಸದರಿ ಗಾಯಗಳು ಕಟ್ಟಿಗೆಯಿಂದ ಹೊಡೆದರು ಆಗುವಂತೆ ಸಾದ್ಯತೆ ಇರುತ್ತದೆ.

ಈಗ ನಾನು ನೋಡುತ್ತಿರುವ ದಾಖಲೆ ನಾನು ಚಾಸಾ–1 ರವರನ್ನು ಪರಿಶೀಲಿಸಿ ನೀಡಿದ ಗಾಯದ ಪ್ರಮಾಣ ಪತ್ರ ಆಗಿದ್ದು, ಅದನ್ನು ನಿಪಿ– 5 ಎಂದು ಗುರುತಿಸಲಾಯಿತು. ಅದರ ಮೇಲೆ ಇರುವ ಸಾಕ್ಷಿ ಸಹಿಯನ್ನು ನಿಪಿ–5(ಎ) ಎಂದು ಗುರುತಿಸಲಾಯಿತು.

**ಪಾಟೀ ಸವಾಲು : ಆರೋಪಿ ಪರ ಶ್ರೀ. ಎಮ್.ಸಿ.ಬಿ ವಕೀಲರಿಂದಃ**

ಕೈಯಿಲ್ಲಿ ಕಲ್ಲಿನಿಂದ ಹೊಡೆದರೆ ನಿಪಿ–5 ರಲ್ಲಿ ಕಂಡು ಬರುವ ಗಾಯಗಳು ಆಗುವುದಿಲ್ಲ ಎಂದರೆ ಸರಿಯಲ್ಲ. ನಿಪಿ–5 ಕ್ಕೆ ರಜಿಸ್ಟರ ನಂಬರನ ಸಂಖ್ಯೆಯನ್ನು ನಮೂದು ಮಾಡಿರುವುದಿಲ್ಲ. ನಿಪಿ–5 ರಲ್ಲಿ ಗಾಯದ ಆಯಸ್ಸನ್ನು ನಮೂದಿಸಿಲ್ಲ ಎಂದರೆ ಸರಿ. ಚಾಸಾ–1 ರವರನ್ನು ಸುಮಾರು 10–15 ನಿಮಿಷಗಳ ಕಾಲ ಪರಿಶೀಲೆ ಮಾಡಿ ಚಿಕಿತ್ಸೆ ನೀಡಿದ್ದೆ. ಪೊಲೀಸರ ಮಾತು ಕೇಳಿಕೊಂಡು ನಿಪಿ–5 ರಂತೆ ಖೊಟ್ಟಿ ಗಾಯದ ಪ್ರಮಾಣ ಪತ್ರವನ್ನು ಸೃಷ್ಟಿಸಿ ನೀಡಿ ಅದಕ್ಕೆ ಅನುಗುಣವಾಗಿ ಸುಳ್ಳು ಸಾಕ್ಷಿ ಹೇಳುತಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆ:** ಇಲ್ಲ.

(ತೆರೆದ ನ್ಯಾಯಾಲದಲ್ಲಿ ನನ್ನ ಹೇಳಿಕೆಯಂತೆ ಬೆರಳಚ್ಚು ಮಾಡಲಾಯಿತು)

**ಓ.ಹೆ.ಕೆ. ಸರಿ ಇದೆ**

**ನ್ಯಾಯಿಕ ದಂಡಾಧಿಕಾರಿಗಳು, ಇಂಡಿ.**